ಓ.ಎಸ್. ನಂ. 262/2017
ಪಿ ಡಬ್ಲ್ಯೂ -1

**ಸಾಕ್ಷಿಯನ್ನು ದಿನಾಂಕ: 15-10-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು ಪ್ರತಿವಾದಿ 1, 3, 4 ರ ಪರ ವಕೀಲರಾದ ಶ್ರೀ DCS ರವರಿಂದ**

**1.** 1ನೇ ಪ್ರತಿವಾದಿಯ ತಾತ ನರಸಿಂಹಯ್ಯ ರವರನ್ನು ನಾನು ನೋಡಿರುವುದಿಲ್ಲ. ಸದರಿ ನರಸಿಂಹಯ್ಯರವರಿಗೆ ಪುಟ್ಟಕಾಮಯ್ಯ, ಚಿಕ್ಕಣ್ಣ , ನರಸಪ್ಪ ಮತ್ತು ಕಾದರಪ್ಪ ಎಂಬ 4 ಜನ ಮಕ್ಕಳು. ಸದರಿಯವರು ಈಗ ಜೀವಂತ ಇರುವುದಿಲ್ಲ ಎಂದರೆ ಸರಿ. ಪುಟ್ಟಕಾಮಯ್ಯ 1ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿ. ಚಿಕ್ಕಣ್ಣನಿಗೆ 2ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿ. ನರಸಪ್ಪನಿಗೆ ಕಾವಲಪ್ಪ ಎಂಬ ಒಬ್ಬನೇ ಮಗ ಎಂದರೆ ಸರಿ. ಸದರಿ ಕಾವಲಪ್ಪನವರು ಅಂಗವಿಕಲನಾಗಿದ್ದು ಓಡಾಡಲು ಅಗುವುದಿಲ್ಲ ಎಂದರೆ ಸರಿಯಲ್ಲ. ನರಸಿಂಹಯ್ಯನ ಕೊನೆ ಮಗ ಕದರಪ್ಪರವರಿಗೆ 3ನೇ ಪ್ರತಿವಾದಿ ಮತ್ತು 4ನೇ ಪ್ರತಿವಾದಿ ತಂದೆ ದೊಡ್ಡಕಾವಲಪ್ಪನವರು ಮಕ್ಕಳು ಎಂದರೆ ಸರಿ. ದೊಡ್ಡಕಾವಲಪ್ಪನವರು ದೊಡ್ಡಬಾಲಯ್ಯನ ಮಗಳಾದ ಗಂಗಮ್ಮ ರವರನ್ನು ಮದುವೆ ಮಾಡಿಕೊಂಡಿರುತ್ತಾರೆಂದರೆ ಸರಿ. ಸದರಿ ದೊಡ್ಡಬಾಲಯ್ಯನಿಗೆ ಗಂಗಮ್ಮ, ಕೃಷ್ಣಪ್ಪ ಜಯಮ್ಮ , ಗೌರಮ್ಮ, ಪಾರ್ವತಮ್ಮ ಎಂಬ 5 ಜನ ಮಕ್ಕಳು. ದೊಡ್ಡಕಾವಲಪ್ಪನವರು ಮನೆಯ ಅಳಿಯನಾಗಿ ದೊಡ್ಡಬಾಲಯ್ಯನ ಅವರ ಮನೆಯಲ್ಲಿ ಇಟ್ಟುಕೊಂಡಿರುತ್ತಾರೆಂದರೆ ಸರಿಯಲ್ಲ.

2. ನರಸಿಂಹಯ್ಯನ 3ನೇ ಮಗ ಕಾವಲಪ್ಪನವರು ದಿನಾಂಕ 13-05-2004 ರಲ್ಲಿ ತೀರಿಕೊಂಡಿರುತ್ತಾರೆಂದರೆ ಸರಿ. ಕಾವಲಪ್ಪನವರು ಮತ್ತು ಗಂಗಮ್ಮ ರವರು ನರಸಿಂಹಯ್ಯನ ಮನೆಯಲ್ಲಿದ್ದರು ಎಂದರೆ ಸರಿಯಲ್ಲ. ಕಾವಲಪ್ಪ ಮತ್ತು ಗಂಗಮ್ಮ ರವರು ಮಣುವಿನಕುರಿಕೆ ಜನತಾ ಕಾಲೋನಿಯಲ್ಲಿ ವಾಸ ಮಾಡುತ್ತಿದ್ದರು. ಸದರಿಯವರು ಆಧಾರ್ ಕಾರ್ಡಗಳು ಮಣುವಿನಕುರಿಕೆ ಗ್ರಾಮಕ್ಕೆ ಸೇರಿದ್ದಾಗಿರುತ್ತವೆಂದರೆ ಸರಿ. ದಾವಾ ಆಸ್ತಿಯು ಕಾವಲಪ್ಪನವರರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆಂದರೆ ಸರಿ. ದಾವಾ ಆಸ್ತಿಯು ಒಟ್ಟು ಕುಟುಂಬದ ಪರವಾಗಿ ಕಾವಲಪ್ಪನವರ ಹೆಸರಿಗೆ ಮಂಜೂರಾಗಿರುತ್ತದೆಂದರೆ ಸರಿಯಲ್ಲ. ಸದರಿ ಕಾವಲಪ್ಪನವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ದಿನಾಂಕ 12-04-2010 ರಂದು ಗಂಗಮ್ಮ ರವರು ನನಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಗಂಗಮ್ಮ ನವರು ಜೀವಂತವಿದ್ದಾಗ ನಾನು ಅವರಿಗೆ ನೊಟೀಸನ್ನು ನೀಡಿರುವುದಿಲ್ಲ. ಗಂಗಮ್ಮ ನವರು ದಾವಾ ಆಸ್ತಿಯಲ್ಲಿ ದುರಸ್ತಿ ಮಾಡಿಸಿ ನಂತರ ಕ್ರಯದ ಪತ್ರವನ್ನು ಬರೆದುಕೊಡುತ್ತೇನೆಂದು ಕಾರಣ ದಾವಾ ಆಸ್ತಿಯನ್ನು ದುರಸ್ತಿ ಪಡಿಸದೇ ಇದ್ದು ನಾನು ಅವರಿಗೆ ನೋಟೀಸನ್ನು ನೀಡಿರುವುದಿಲ್ಲ. ದಿನಾಂಕ 12-04-2010 ರಂದು ನಾನು ಗಂಗಮ್ಮ ನವರಿಗೆ ಕ್ರಯದ ಪೂರ್ತಿ ಹಣವಾದ 3 ಲಕ್ಷ ರೂ.ಗಳನ್ನು ನೀಡಿರುತ್ತೇನೆ. ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆಯುವ ವಿಚಾರವಾಗಿ ದಿನಾಂಕ 12-

04-2010 ಕ್ಕಿಂತ ಒಂದು ವಾರದ ಹಿಂದೆ ಮಾತುಕತೆಯಾಗಿತ್ತು. ಆ ಸಮಯದಲ್ಲಿ ಮಣುವಿನಕುರಿಕೆ ಗ್ರಾಮದ ಮಹದೇವಯ್ಯ ಮತ್ತು ಇತರರು ಇದ್ದು, ಮಹದೇವಯನವರ ಹೆಸರು ಮಾತ್ರ ಗೊತ್ತು ಬೇರೆಯವರ ಹೆಸರು ಗೊತ್ತಿಲ್ಲ. ಮಾತುಕತೆಯದಾಗ ನಾನು ಹಣವನ್ನು ಒಂದು ವಾರದೊಳಗಾಗಿ ಹೊಂದಿಸಿಕೊಂಡು ನೀಡುವುದಾಗಿ ಹೇಳಿರುತ್ತೇನೆ. ದಾವಾ ಆಸ್ತಿಯು ಕ್ರಯದ ಕರಾರು ದಿನಾಂಕಂದು ದುರಸ್ತಿ ಆಗದೇ ಇರುವ ಕಾರಣ ಕ್ರಯ ಪತ್ರವನ್ನು ಬರೆಸಿಕೊಂಡಿರುವುದಿಲ್ಲ. ಗಂಗಮ್ಮ ನನ್ನ ಅತ್ತೆಯಾದ ಕಾರಣ ಕರಾರು ಪತ್ರವನ್ನು ನೊಂದಾವಣಿ ಮಾಡಿಸಿರುವುದಿಲ್ಲ.

3. ಕರಾರು ಪತ್ರಕ್ಕೆ 50 ರೂ. ಮುಖಬೆಲೆಯ ಚಾಪಾ ಕಾಗದವನ್ನು ನಾನು ಬೆಂಗಳೂರು ರಾಜಾಜಿನಗರದಿಂದ ತಂದಿರುತ್ತೇನೆ. ನಿಪಿ-22 ರ ಚಾಪಾ ಕಾಗದದ ಬೆಲೆಯೂ 2 ರೂಪಾಯಿ ಆಗಿರುತ್ತದೆಂದರೆ ಸರಿಯಲ್ಲ. ಗಂಗಮ್ಮ ನವರು ಹೆಬ್ಬಟ್ಟು ಹಾಕುತ್ತಿದ್ದರು ಎಂದರೆ ಸರಿ. ನಿಪಿ-22 ನ್ನು ಕೊರಟಗೆರೆಯಲ್ಲಿ ಪ್ರಬಯ್ಯರವರ ಕಚೇರಿಯಲ್ಲಿ ಬರೆದಿರುತ್ತಾರೆ. ನಿಪಿ-22 ಕ್ಕೆ ಮಾಹಿತಿಯನ್ನು ಗಂಗಮ್ಮ ರವರು ನೀಡಿರುತ್ತಾರೆ. ನಿಪಿ-22 ಕ್ಕೆ ಗೋವಿಂದಪ್ಪ ಬಿನ್. ಹನುಮಂತಪ್ಪ, ಮಹದೇವಯ್ಯ ಬಿನ್. ಉಮಾಪತಯ್ಯ, ಮುಚ್ಚೆಂದ್ರ ಬಿನ್. ಸಂಜೀವಯರಾಯಪ್ಪ, ಪಾರ್ವತಮ್ಮ ಕೋಂ ಚಿಕ್ಕಣ್ಣ ಮಣುವಿನಕುರಿಕೆ ರವರು ಸಾಕ್ಷಿದಾರರಾಗಿ ಸಹಿಗಳನ್ನು ಮಾಡಿರುತ್ತಾರೆ. ಸದರಿಯವರು ಪರಿಚಯಸ್ಥರು ಎಂದರೆ ಸರಿ. ನಿಪಿ-22 ರ ಛಾಪಾ ಕಾಗದದಲ್ಲಿ ಸದರಿ ಛಾಪಾ ಕಾಗದವನ್ನು ಯಾವಾಗ ಪಡೆದುಕೊಂಡಿರುವುದಿಲ್ಲ ಎಂಬುದರ ಬಗ್ಗೆ ದಿನಾಂಕ ನಮೂದು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ 5ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ, 8ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ. ನಿಪಿ-22 ನ್ನು ಸಂಜೆ 5.00 ಗಂಟೆ ಸಮಯದಲ್ಲಿ ಬರೆದ ಕಾರಣ ಛಾಪಾ ಕಾಗದದಲ್ಲಿ ಕರಾರು ಪತ್ರದಲ್ಲಿ ಬರೆದಿರುವುದಿಲ್ಲ, ದಸ್ತಾವೇಜಿನ ಹಳೆಯಲ್ಲಿ ಕರಾರು ಪತ್ರವನ್ನು ಬರೆದಿರುತ್ತಾರೆ. ನಾನು ದಿಃ 12.04.2010 ರಂದು ಛಾಪಾ ಕಾಗದವನ್ನು ತರಲು ಪ್ರಯತ್ನ ಪಟ್ಟಿದ್ದು , ಸಿಗದೇ ಇರುವ ಕಾರಣ ದಸ್ತಾವೇಜಿನ ಹಾಳೆಯಲ್ಲಿ ಕರಾರು ಪತ್ರವನ್ನು ಬರೆಸಿಕೊಂಡಿರುತ್ತೇನೆ.

4. ದಾವಾ ಆಸ್ತಿಯಲ್ಲಿ ದೊಡ್ಡಬಾಲಯ್ಯನವರ ಕುಟುಂಬದವರು ಜಂಟಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಿಃ 12.04.2010 ರಂದು ಗಂಗಮ್ಮನವರು ನನಗೆ ನಿಪಿ-22 ನ್ನು ಬರೆದುಕೊಟ್ಟಿರುವುದಿಲ್ಲ ಹಾಗೂ ನನ್ನಿಂದ ಯಾವುದೇ ಹಣವನ್ನು ಅವರು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸಾಕ್ಷಿದಾರರು ಸೇರಿಕೊಂಡು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶನಿಂದ ನಿಪಿ-22 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-22 ಕ್ಕೆ ಗಂಗಮ್ಮನವರು ಹೆಬ್ಬೆಟ್ಟನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಕೃಷ್ಣಪ್ಪನಿಗೆ ಸೇರಿದ್ದು ಎಂದರೆ ಸರಿಯಲ್ಲ.

**ಪ್ರತಿವಾದಿ 5 ರಿಂದ 7 ರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಾಕಾಶ ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**sd/-**
**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**